ಬೆಳಗಿಸಿ ತೋರಿದ್ದಾನೆ.

* * *

'ಧಾರವಾಡ ಸಾಹಿತ್ಯ ಸಂಭ್ರಮ'ದಲ್ಲಿ ಈ ಸಲ ನಾಡಿಗನ ಜೊತೆ ನಾನೇ ಸಂವಾದ ನಡೆಸಬೇಕೆಂದು ಗಿರಡ್ಡಿ ಒತ್ತಾಯ ಮಾಡಿದ್ದ. ಇಲ್ಲಿಯ ಎಲ್ಲರಿಗೂ ನನ್ನ ಮತ್ತು ನಾಡಿಗನ ಬಾಂಧವ್ಯ ಗೊತ್ತಿತ್ತು. 2017 ಜನವರಿ 18ರ ಸಂಜೆಗೇ, ಮಾಲತಿ ಜೊತೆ ಕಾರಿನಲ್ಲಿ, ಧಾರವಾಡಕ್ಕೆ ಬಂದ. 19ರ ಬೆಳಗ್ಗೆ ಅವನು ತಂಗಿದ್ದ ಕರ್ನಾಟಕ ಭವನದಲ್ಲಿ ಹೋಗಿ ಮಾತಾಡಿಸಿದೆ.

2017 ಜನವರಿ 21ರಂದು ನಡೆಯಲಿದ್ದ ನಮ್ಮ ಸಂವಾದದ ಬಗ್ಗೆ ಅವನಿಗೆ ಯಾವ ಚಿಂತೆಯೂ ಇರಲಿಲ್ಲ, ಪೂರ್ವಸಿದ್ಧತೆಯೂ ಬೇಕಿರಲಿಲ್ಲ. 21ರ ಬೆಳಗ್ಗೇನೇ ಮಾಲತಿ ಜೊತೆ ನಮ್ಮ ಮನೆಗೆ ಬಂದ. ತಿಂಡಿ ತಿಂದು, ನೇರವಾಗಿ ಸಂಭ್ರಮದ ಸ್ಥಳಕ್ಕೆ ಹೋದೆವು. ಎಲ್ಲರನ್ನೂ ನಿರಾಯಾಸವಾಗಿ ಮಾತಾಡಿಸಿದ. ಹಳೆಯ ನೆನಪುಗಳೊಂದಿಗೆ ಹೊಸಬನಾಗಿದ್ದ. ನನ್ನ ಮತ್ತು ಸುಮತಿಯ ಸಂವಾದ ಇಷ್ಟು ವರ್ಷ ಯಾರೂ ಅನುಭವಿಸಿರದಂಥ ಅಪೂರ್ವ ಅನುಭವ ನೀಡಿತ್ತು. ಒಂದು ತಾಸಿನ ನಮ್ಮ ಹೃದ್ಯ, ನೇರ, ಏನೂ ಮುಚ್ಚುಮರೆ ಇರದ, ಮುಕ್ತ ಆಪ್ತ ಚರ್ಚೆ ಮುಗಿದದ್ದೇ ಎಲ್ಲರಿಗೂ ವಿಸ್ಮಯವೆನಿಸಿತ್ತು. ಬೇರೆ ಬೇರೆ ಸಂಸ್ಥೆಗಳು, ಪ್ರತಿಷ್ಠಾನಗಳು, ಅಕಾಡೆಮಿಗಳು ಮುಂತಾದುವು ಇಷ್ಟು ವರ್ಷ ಕಾಲ ನಾಡಿಗನನ್ನು ನಿರ್ಲಕ್ಷಿಸಿದುದಕ್ಕೆ ತಾವೇ ಪಶ್ಚಾತ್ತಾಪ ಪಡುವ ಹಾಗೆ ಅವನ ಪ್ರತಿಭೆ, ವಿದ್ವತ್ತು, ಅಧ್ಯಯನ, ಸ್ಮರಣಶಕ್ತಿ, ವಾಕ್‌ಚಾತುರ್ಯ, ಪ್ರತ್ಯುತ್ಪನ್ನಮತಿ ಎಲ್ಲವೂ ಏಕಕಾಲಕ್ಕೆ ಹೊರಹೊಮ್ಮಿದ್ದುವು. ಸಮಾರೋಪ ಭಾಷಣದಲ್ಲಿ ಸಂಭ್ರಮದ ಮೂರೂ ದಿನದ ಕಾರ್ಯಕ್ರಮಗಳನ್ನು ತೂಕಬದ್ಧವಾಗಿ ವಿಶ್ಲೇಷಿಸಿದ ಓ.ಎಲ್. ನಾಗಭೂಷಣಸ್ವಾಮಿ ನಮ್ಮ ಸಂವಾದ ಕಾರ್ಯಕ್ರಮವನ್ನು ಮುಕ್ತಕಂಠದಿಂದ ಪ್ರಶಂಸಿಸಿದರು. ನನ್ನ, ನಾಡಿಗನ ಸಂವಾದ ಕೇಳುಗರನ್ನು 20 ವರ್ಷ ಮುಂದಕ್ಕೆ ಕರೆದುಕೊಂಡು ಹೋಯಿತು, ಎಂದರು.

* * *

ಬಹುಶಃ 1975-76ರ ನಂತರ 'ಸಂಕ್ರಮಣ'ದ ಸ್ವರೂಪದಲ್ಲಿ, ಆಶಯದಲ್ಲಿ ಬಹಳಷ್ಟು ಬದಲಾವಣೆಗಳು ಬಂದುಹೋದುವು. ಆದರೂ

